# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 17 | Pages. 2 | Date: 12-12-2025, FRIDAY

RNI NO: KARKAN/2024/89601

Kannada Daily

ಸಂಪುಟ : 02 - ಸಂಚಿಕೆ : 17 - ಪುಟಗಳು : 2 12-12-2025 ಶುಕ್ರವಾರ

Ph: 8762954248

ದರ : ₹1


# ಘೋಷಣೆಗಷ್ಟೇ ಸೀಮಿತವಾದ ಮೆಕ್ಕೆಜೋಳ ಖರೀದಿ

## 10 ಸಾವಿರ ಮೆಟ್ರಿಕ್ ಟನ್ ನೋಂದಣಿ ಮುಕ್ತಾಯ | ಸರ್ಕಾರದ ಆದೇಶಕ್ಕೂ ಕಿಮ್ಮತ್ತಿಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮೆಕ್ಕೆ ಜೋಳ ಬೆಳೆಗಾರರಿಗೆ ನೆರವಾಗಲೆಂದು ಬೆಂಬಲ ಬೆಲೆಯಡಿ ಪ್ರತಿ ರೈತರಿಂದ 50 ಕ್ವಿಂಟಾಲ್ ಜೋಳ ಖರೀದಿಗೆ ಸರ್ಕಾರ ಆದೇಶ ಹೊರಡಿಸಿದೆಯಾದರೂ ಕರ್ನಾಟಕ ಹಾಲು ಮಹಾಮಂಡಳ (ಕ.ಹಾ.ಮ.) ಖರೀದಿ ಮಾಡದೆ ಸರ್ಕಾರಿ ಆದೇಶಕ್ಕೂ ತಮಗೂ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದೆ.

ಪ್ರತಿ ಕ್ವಿಂಟಾಲ್‌ಗೆ 2,400 ರೂ.ನಂತೆ 50 ಕ್ವಿಂಟಾಲ್ ಮಾರಾಟ ಮಾಡಬಹುದೆಂದು ರೈತರು ಖುಷಿಯಲ್ಲಿದ್ದರು. ಹೊಳೆನರಸೀಪುರ ರಸ್ತೆಯಲ್ಲಿರುವ ಪಶು ಆಹಾರ ಘಟಕದಲ್ಲಿ ನೋಂದಣಿ ಪ್ರಕ್ರಿಯೆ ನಡೆಯುತ್ತಿಲ್ಲ. 10 ಸಾವಿರ ಮೆಟ್ರಿಕ್ ಟನ್ ನೋಂದಣಿಗೆ ಮೇಲಧಿಕಾರಿಗಳಿಂದ ಆದೇಶವಿತ್ತು. 4,137 ರೈತರು ಇದುವರೆಗೆ ನೋಂದಣಿ ಮಾಡಿಕೊಂಡಿದ್ದು ಪ್ರಕ್ರಿಯೆ ಮುಕ್ತಾಯವಾಗಿದೆ. ಹೊಸದಾಗಿ ಖರೀದಿಗೆ ಸೂಚನೆ ಬಂದಿಲ್ಲವೆಂದು ಸ್ಥಳೀಯ ಅಧಿಕಾರಿಗಳು ಉತ್ತರಿಸುತ್ತಿದ್ದಾರೆ. ಸರ್ಕಾರದ ಆದೇಶವಿದ್ದರೂ ಖರೀದಿಸದೆ ಇರುವ ಅಧಿಕಾರಿಗಳ ವಿರುದ್ಧ ಅನ್ನದಾತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ವಾರ್ಷಿಕ 36 ಸಾವಿರ ಮೆಟ್ರಿಕ್ ಟನ್ ಸಾಕು

ಹಾಸನ ಪಶು ಆಹಾರ ಘಟಕದಲ್ಲಿ ನಿತ್ಯ 500 ಟನ್‌ನಂತೆ ಪಶು ಆಹಾರ ಸೇರಿ ಇತರ ಉಪ ಉತ್ಪನ್ನಗಳ ತಯಾರಿಸಲು ವಾರ್ಷಿಕ 36 ಸಾವಿರ ಮೆಟ್ರಿಕ್ ಟನ್ ಮೆಕ್ಕೆ ಜೋಳದ ಅವಶ್ಯಕತೆಯಿದೆ. ಘಟಕದಲ್ಲಿ ಈಗಾಗಲೇ 30 ಸಾವಿರ ಮೆ. ಟನ್ ಜೋಳ ದಾಸ್ತಾನಿದೆ. ಅದರ ಹೊರತಾಗಿ ಬೆಂಬಲ ಬೆಲೆಯಡಿ ಇನ್ನೂ 30 ಸಾವಿರ ಮೆ. ಟನ್ ಖರೀದಿಸುವಂತೆ ಒತ್ತಡ ಹೇರುತ್ತಿದ್ದು ಅಷ್ಟು ಪ್ರಮಾಣದ ಜೋಳ ಪಡೆದು ಏನು ಮಾಡುವುದು. ಆದಾಗ್ಯೂ ಹೆಚ್ಚುವರಿಯಾಗಿ ಜೋಳ ಖರೀದಿಸಲು ಮೇಲಧಿಕಾರಿಗಳ ನಿರ್ದೇಶನವಿಲ್ಲವೆಂದು ಪಶು ಆಹಾರ ಘಟಕ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಿ ರಂಗನಾಥ್ ಪ್ರತಿಕ್ರಿಯಿಸಿದರು.



ಇದೇ ವಿಚಾರವಾಗಿ ಕಳೆದ ತಿಂಗಳು ಜಿಲ್ಲಾಧಿಕಾರಿ ಕಚೇರಿ ಎದುರು ರೈತ ಸಂಘಟನೆಗಳ ಪದಾಧಿಕಾರಿಗಳು ನಿರಂತರ ಐದು ದಿನಗಳ ಕಾಲ ಪ್ರತಿಭಟನೆ ನಡೆಸಿದ್ದರು. ಬಳಿಕ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸರ್ಕಾರಕ್ಕೆ ಪತ್ರ ಬರೆದು ಬೆಂಬಲ ಬೆಲೆ ಘೋಷಿಸುವಂತೆ ಮನವಿ ಮಾಡಿದ್ದರು. ರಾಜ್ಯಾದ್ಯಂತ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ರಾಜ್ಯ ಸರ್ಕಾರ ಎಚ್ಚೆತ್ತು ಫ್ರೂಟ್ಸ್ ಐಡಿ ಹೊಂದಿರುವ ಪ್ರತಿ ರೈತರಿಂದ 5 ರಿಂದ 20 ಕ್ವಿಂಟಾಲ್ ವರೆಗೆ ಖರೀದಿಗೆ ಒಪ್ಪಿಗೆ ಸೂಚಿಸಿತ್ತು. ರೈತರು ಖರೀದಿ ಪ್ರಮಾಣ ಹೆಚ್ಚಿಸಬೇಕು ಇಲ್ಲವಾದರೆ ಬೆಳಗಾವಿ ಅಧಿವೇಶನ ವೇಳೆ ಹೋರಾಟ ನಡೆಸುವ ಎಚ್ಚರಿಕೆ ನೀಡಿದ್ದರಿಂದ ಡಿ. 7ರಂದು 50 ಕ್ವಿಂಟಾಲ್ ಖರೀದಿಗೆ ಸಮ್ಮತಿ ಸೂಚಿಸಿದೆ. ಹಾಸನದಲ್ಲಿ ಮಾತ್ರ ಸರ್ಕಾರದ ಆದೇಶ ಪಾಲನೆಯಾಗುತ್ತಿಲ್ಲ.

### 4,81,069 ಮೆ. ಟನ್ ಉತ್ಪಾದನೆ ಗುರಿ

ಜಿಲ್ಲೆಯು 2,29,974 ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 1,01,065 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆ ಕೈಗೊಳ್ಳಲಾಗಿದೆ. ಹೈನುಗಾರಿಕೆ ಹಾಗೂ ವಾತಾರವಣಕ್ಕೆ ಫಸಲು ಚೆನ್ನಾಗಿ ಬರುತ್ತದೆ. ಈ ಬಾರಿ 4,81,069 ಮೆಟ್ರಿಕ್ ಟನ್ ಉತ್ಪಾದನೆ ಗುರಿ ಹೊಂದಲಾಗಿದೆ. ಒಟ್ಟು ಉತ್ಪಾದನೆಯಲ್ಲಿ ಶೇ. 5 ರಿಂದ 10ರಷ್ಟು ಮಾತ್ರ ಬೆಂಬಲ ಬೆಲೆಯಡಿ ಖರೀದಿಸಲು ಸಾಧ್ಯವಿದ್ದು ಅದರ ಪ್ರಮಾಣ ಹೆಚ್ಚಿಸಬೇಕೆಂದು ರೈತರು ಆಗ್ರಹಿಸಿದ್ದಾರೆ.

### ಡಿಸ್ಟಲರಿಗಳಿಗೆ ಆದೇಶ ಹೊರಡಿಸಿ

ಪಶು ಆಹಾರ ಘಟಕಗಳು ಮಾತ್ರವಲ್ಲದೆ ಡಿಸ್ಟಲರಿಗಳು ಮೆಕ್ಕೆಜೋಳ ಖರೀದಿಸಬೇಕಿದ್ದು ಅದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕಿದೆ. ನಾಫೆಡ್ ಮೂಲಕ ಪ್ರತಿ ಕ್ವಿಂಟಾಲ್‌ಗೆ 2,639 ರೂ. ದರದಲ್ಲಿ ಮೆಕ್ಕೆಜೋಳ ಖರೀದಿಗೆ ಡಿಸ್ಟಲರಿಗಳಿಗೆ ಆದೇಶ ಹೊರಡಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾನ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

### ಹೋರಾಟದ ಎಚ್ಚರಿಕೆ

ಸರ್ಕಾರದ ನಿರ್ದೇಶನದಂತೆ ಪ್ರತಿ ರೈತರಿಂದ 50 ಕ್ವಿಂಟಾಲ್ ಮೆಕ್ಕೆ ಜೋಳ ಖರೀದಿಸಬೇಕೆಂದು ರೈತ ಸಂಘಟನೆಗಳು ಆಗ್ರಹಿಸಿದ್ದು ಕ.ಹಾ.ಮ. ನಿರ್ಲಕ್ಷ್ಯ ತೋರಿದರೆ ಕಚೇರಿ ಎದುರು ಪ್ರತಿಭಟನೆ ನಡೆಸಬೇಕಾಗುತ್ತದೆಂದು ಎಚ್ಚರಿಕೆ ನೀಡಿವೆ. ಸರ್ಕಾರದ ಆದೇಶಕ್ಕೂ ಬೆಲೆ ಇಲ್ಲವೆಂದರೆ ಅಧಿಕಾರಿಗಳು ಯಾರ ಮಾತು ಕೇಳುತ್ತಾರೆಂದು ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಪ್ರಶ್ನಿಸಿದ್ದಾರೆ.

# ಮೆಕ್ಕೆಜೋಳ, ಕಬ್ಬಿಗೆ ಬೆಂಬಲ ಬೆಲೆ ಘೋಷಿಸಿ: ಸಂಸದ ಶ್ರೇಯಸ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ನವದೆಹಲಿ: ಮೆಕ್ಕೆಜೋಳ ಹಾಗೂ ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ಘೋಷಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಸಂಸತ್ ಅಧಿವೇಶನದಲ್ಲಿ ಗುರುವಾರ ಮಾತನಾಡಿ, ರಾಜ್ಯದಲ್ಲಿ ವಾರ್ಷಿಕ 360 ಎಲ್‌ಎಂಟಿ ಸಕ್ಕರೆ ಉತ್ಪಾದನೆಯಾಗುತ್ತದೆ. ಕಬ್ಬು ಕಟಾವು ಮತ್ತು ಸಾಗಾಟ ವೆಚ್ಚ ಕಳೆದ ಬಳಿಕ ಪ್ರತಿ ಟನ್‌ಗೆ 2,600 ರಿಂದ 3,000 ರೂ. ಮಾತ್ರ ಲಭಿಸುತ್ತಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್‌ಆರ್‌ಪಿ 3,550 ರೂ. ಇದ್ದರೂ ಇದುವರೆಗೆ ನೀಡಿಲ್ಲ. ಕೂಡಲೇ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು. ಪ್ರತಿ ಕೆ.ಜಿ. ಸಕ್ಕರೆ ಎಂಎಸ್‌ಪಿಯನ್ನು 31 ರಿಂದ 41ರೂ.ಗೆ ಹೆಚ್ಚಿಸಬೇಕು. ರಾಜ್ಯದ ಸಾಮರ್ಥ್ಯಕ್ಕೆ ತಕ್ಕಂತೆ ಎಥೆನಾಲ್ ಖರೀದಿ ಪ್ರಮಾಣ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಈ ವರ್ಷ ಕರ್ನಾಟಕದಲ್ಲಿ 17.64 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಜೋಳ ಬೆಳೆ ಬೆಳೆದಿದ್ದು, 53.8 ಎಲ್‌ಎಂಟಿ ಉತ್ಪಾದನೆ ನಿರೀಕ್ಷೆಯಿದೆ. ಮಾರುಕಟ್ಟೆ ದರ ಕ್ವಿಂಟಾಲ್‌ಗೆ 1,600 ರಿಂದ 1,900 ರೂ.ಗೆ ಇಳಿದಿದೆ. ರಾಜ್ಯ ಸರ್ಕಾರ ಪ್ರತಿ ಕ್ವಿಂಟಾಲ್‌ಗೆ 2,400 ರೂ. ಘೋಷಿಸಿದೆ. ಕೇಂದ್ರ ಸರ್ಕಾರವು 2,639 ರೂ. ಎಫ್‌ಆರ್‌ಪಿ ಘೋಷಿಸಿ ತಕ್ಷಣ ಖರೀದಿಗೆ ಅನುಮತಿ ನೀಡಬೇಕು ಎಂದು ಕೋರಿದರು.

# ಹಾಸನದ ಪ್ರಮುಖ ರಸ್ತೆಗಳಿಗೆ ಮಹನೀಯರ ಹೆಸರು: ಸ್ವಾಗತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರ ವ್ಯಾಪ್ತಿಯ ಹಲವು ರಸ್ತೆ ಹಾಗೂ ವೃತ್ತಗಳಿಗೆ ಮಹನೀಯರ ಹೆಸರಿಡಲು ಮುಂದಾಗಿರುವ ಮಹಾನಗರ ಪಾಲಿಕೆ ನಿರ್ಧಾರ ಸ್ವಾಗತಾರ್ಹ ಎಂದು ದಲಿತ ಸಂಘಟನೆಗಳ ಸಮನ್ವಯ ಸಮಿತಿ ಸಂಚಾಲಕ ಕೃಷ್ಣದಾಸ್ ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ನಗರಸಭೆ, ನಗರ ಪಾಲಿಕೆಯಾಗಿರುವುದರಿಂದ ವ್ಯಾಪ್ತಿ ಹಿಗ್ಗಿದೆ. ಸಾರ್ವಜನಿಕ, ಮೂಲಭೂತ ಸೌಕರ್ಯ ಅಭಿವೃದ್ಧಿ, ರಸ್ತೆ, ನೀರು, ಕಸ ವಿಲೇವಾರಿ ಕಾರ್ಯ, ನಗರ ಯೋಜನೆ, ಪರಿಸರ ಸುಂದರೀಕರಣ ಮತ್ತಿತರ ಪ್ರಮುಖ ಕಾಮಗಾರಿಗಳ ಅಗತ್ಯ ತೀವ್ರಗೊಳ್ಳುತ್ತಿದೆ. ಇದಕ್ಕೆ ಪೂರಕವಾದ ವಿಶೇಷ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಪಾಲಿಕೆ ಪ್ರಕಟಣೆಯಲ್ಲಿ ಹೆಸರಿಸಿರುವ ಗಣ್ಯರ ಜೊತೆಗೆ ಜಿಲ್ಲೆಯ ಅನೇಕ ಮಹನೀಯರ ಹೆಸರುಗಳನ್ನೂ ಪರಿಗಣಿಸಬೇಕು. ಜಿಲ್ಲೆಯಲ್ಲಿ ಜನ್ಮ ತಾಳಿದ ಅನೇಕರು, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಸಾಮಾಜಿಕ ಕ್ಷೇತ್ರಗಳ ದಿಗ್ಗಜರು ರಾಜ್ಯ ಮತ್ತು ದೇಶಕ್ಕೆ ತಮ್ಮದೇ ಶಾಶ್ವತ ಕೊಡುಗೆ ನೀಡಿದ್ದಾರೆ. ಅವರಲ್ಲಿ ಜಾನಪದ ಹಾಗೂ ಸಾಹಿತ್ಯ ಕಣಜವನ್ನು ಶ್ರೀಮಂತಗೊಳಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕಥೆ, ಕಾದಂಬರಿ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದ ಅನಕೃ, ಗಂಭೀರ ಚಿಂತನೆಯ ಲೇಖಕ ಎಸ್.ವಿ. ರಂಗಣ್ಣ, ಜಾನಪದ ತಜ್ಞ

ಡಾ. ಎಸ್.ಕೆ.ಕರೀಂ ಖಾನ್, ಕಿ.ರಂ.ನಾಗರಾಜ್, ಕನ್ನಡದ ಮೊದಲ ತಲೆಮಾರಿನ ದಲಿತ ಕವಿ ಡಿ.ಗೋವಿಂದ ದಾಸ್, ಡಾ.ಎಸ್.ಎಲ್. ಭೈರಪ್ಪ, ಶ್ರವಣಬೆಳಗೊಳ ಜೈನ ಮಠದ ಭಟ್ಟಾರಕ ಚಾರುಕೀರ್ತಿ ಮಹಾಸ್ವಾಮೀಜಿ, ಜ್ವಾಲನಯ್ಯ, ಇಸ್ರೋ ವಿಜ್ಞಾನಿ ಎ.ಎಸ್. ಕಿರಣ್ ಕುಮಾರ್, ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಸ್ತಾಕ್, ದಸಂಸ ರಾಜ್ಯ ಸಂಚಾಲಕರಾಗಿದ್ದ ಬಿ.ವಿ. ಚಂದ್ರಪ್ರಸಾದ್ ತ್ಯಾಗಿ, ಬೇಲೂರು ಕೃಷ್ಣಮೂರ್ತಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದಿ.ಹೆಚ್.ಎಂ. ಶಿವಣ್ಣ ಮೊದಲಾದವರ ಹೆಸರುಗಳನ್ನೂ ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಅನೇಕ ಮಹನೀಯರಿಗೆ ಹಾಸನ ಜನ್ಮ ನೀಡಿದೆ. ಅಂತೆಯೇ ಸಾಹಿತ್ಯ, ವಿಜ್ಞಾನ, ನಾಟಕ, ಜಾನಪದ, ಸಮಾಜಪರ ಹೋರಾಟ ಮತ್ತು ಜೈನ ತತ್ವದ ಪರಂಪರೆ, ಸಂಸ್ಕೃತಿಯ ಅಭಿವ್ಯಕ್ತಿಯನ್ನು ಹೊಂದಿದೆ. ಈ ಭವ್ಯ ಇತಿಹಾಸವನ್ನು ಮುಂದಿನ ಪೀಳಿಗೆಗಳಿಗೆ ಪರಿಚಯಿಸಬೇಕಾದ ಜವಾಬ್ದಾರಿ ನಗರ ಪಾಲಿಕೆ, ನಮ್ಮೆಲ್ಲರ ಮೇಲಿರುವುದರಿಂದ ಎಲ್ಲ ಸಾಧಕರಿಗೂ ಮನ್ನಣೆ ನೀಡಬೇಕು. ಇದರಿಂದ ಜಿಲ್ಲೆಯ ಗೌರವ ಮತ್ತು ಐತಿಹಾಸಿಕ ಪರಂಪರೆ ಇನ್ನಷ್ಟು ಪ್ರಭಾವಿಯಾಗುತ್ತದೆ.

ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಮತ್ತು ಆಯುಕ್ತರಿಗೆ ಮನವಿ ಮಾಡಿದರು.

ದಸಂಸ ರಾಜ್ಯ ಸಂಘಟನಾ ಸಂಚಾಲಕ ಈರೇಶ್ ಹಿರೇಹಳ್ಳಿ, ಎಸ್ ಸಿ-ಎಸ್‌ಟಿ ನಿವೃತ್ತ ನೌಕರರ ಸಂಘದ ಎಂ.ಕೃಷ್ಣಯ್ಯ, ಹಂದಿಜೋಗಿ ಸಂಘದ ರಾಜ್ಯ ಉಪಾಧ್ಯಕ್ಷ ಗೋವಿಂದ ರಾಜು, ಮುಖಂಡರಾದ ರಾಮು, ತೋಟೇಶ್ ಇದ್ದರು.

# ಮಲೆನಾಡು ಜನರ ನಿದ್ದೆಗೆಡಿಸಿದ ಕಾಫಿ ಕಳ್ಳರು

## ಬೆಳೆಗಾರನ ಮೇಲೆ ಮಚ್ಚಿನಿಂದ ಹಲ್ಲೆ | ಸ್ಥಳಕ್ಕೆ ಎಸ್‌ಪಿ ಭೇಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರೇಹಳ್ಳಿ: ಕಾಫಿ ಕಳವಿಗೆ ಬಂದವರನ್ನು ತಡೆಯಲು ಹೋದ ಮಾಲೀಕನ ಮೇಲೆ ಖದೀಮರ ತಂಡ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಗುರುವಾರ ಬೆಳಿಗ್ಗೆ 4.30ರ ಸಮಯದಲ್ಲಿ ಮೂರ್ನಾಲ್ಕು ಜನರಿದ್ದ ಖದೀಮರ ಗುಂಪು ಕಾಫಿ ದೋಚಲು ಸಾಕಷ್ಟು ಹೊಂಚು ಹಾಕಿತ್ತು. ಅದೇ ವೇಳೆಗೆ ಎಚ್ಚೆತ್ತ ಕಾಫಿ ಬೆಳೆಗಾರ ಜಗನ್ನಾಥ್ ಶೆಟ್ಟಿ ಎಂಬುವರು ಕಾರಿನಿಂದ ಹೊರಗೆ ಬಂದು ಕಳವು ತಡೆಯಲು ಯತ್ನಿಸಿದರು.

ಅದನ್ನು ಗಮನಿಸಿದ ಗುಂಪು ಜಗನ್ನಾಥ್ ಶೆಟ್ಟಿ ಅವರ ತಲೆಗೆ ಮಚ್ಚಿನಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದೆ. ಬಳಿಕ ಅಲ್ಲಿದ್ದ ಸುಮಾರು 100 ಕೆಜಿ ಕಾಫಿಯನ್ನು ದೋಚಿ ಪರಾರಿಯಾಗಿದೆ.

ಸುದ್ದಿ ತಿಳಿದ ಪ್ಲಾಂಟರ್ಸ್ ಸಂಘದ ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿ, ಕರ್ನಾಟಕ ಕಾಫಿ ಬೆಳೆಗಾರರ ಸಂಘದ ಮಾಜಿ ಉಪಾಧ್ಯಕ್ಷ ಬಿ.ಪಿ ಬಸವರಾಜ್ ಹಾಗೂ ಗ್ರಾಮದ ಮುಖಂಡ ಅಮಿತ್ ಶೆಟ್ಟಿ ಹಲ್ಲೆ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.



ಈ ವೇಳೆ ಮಾತನಾಡಿದ ಅವರು, ಪೊಲೀಸ್ ಇಲಾಖೆ ತಪ್ಪಿತಸ್ಥರನ್ನು ಅದಷ್ಟು ಬೇಗ ಪತ್ತೆ ಹಚ್ಚಿ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಇಂತಹ ಪ್ರಕರಣಗಳು ನಮ್ಮ ಭಾಗದಲ್ಲಿ ಮತ್ತೆಂದಿಗೂ ಮರುಕಳಿಸಬಾರದು. ಮೂರ್ನಾಲ್ಕು ದಿನಗಳ ಹಿಂದೆ ಅದೇ ಸ್ಥಳದಲ್ಲಿ ಕಾಫಿ ಕಳವು ನಡೆದು ಪೊಲೀಸರಿಗೆ ಮಾಹಿತಿ ನೀಡಿ ಪ್ರಕರಣ ಸಹ ದಾಖಲಾಗಿತ್ತು. ಆದರೂ ಅಂತದೇ ಕೃತ್ಯಗಳು ಮರುಕಳಿಸುತ್ತಿವೆ ಎಂದರೆ ಇದು ಯಾರ ವೈಫಲ್ಯ ಎಂದು ಪ್ರಶ್ನಿಸಿದರು.

ಪೊಲೀಸ್ ವರಿಷ್ಠಾಧಿಕಾರಿ ಭೇಟಿ: ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಸ್ಥಳೀಯ ಅಧಿಕಾರಿಗಳೊಂದಿಗೆ ಪ್ರಕರಣ ಕುರಿತು ಹೆಚ್ಚಿನ ಮಾಹಿತಿ ಪಡೆದರು.

ಇದಲ್ಲದೇ ಶ್ವಾನ ದಳದ ವಿಶೇಷ ತನಿಖಾ ತಂಡದಿಂದಲೂ ತನಿಖೆ ಮುಂದುವರೆದಿದ್ದು, ಆರೋಪಿಗಳ ಪತ್ತೆಗೆ ಸ್ಥಳೀಯ ಪೊಲೀಸರು ಬಲೆ ಬೀಸಿದ್ದಾರೆ. ಗಾಯಾಳು ಜಗನ್ನಾಥ್ ಶೆಟ್ಟಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಹಿಂದೆಯೂ ನಡೆದಿತ್ತು: ಕಳೆದ ಭಾನುವಾರ ತಡರಾತ್ರಿ 3 ರ ಸಮಯದಲ್ಲಿ ಮೂರ್ನಾಲ್ಕು ಜನರಿದ್ದ ಖದೀಮರ ಗುಂಪು ಸುಮಾರು 2 ಲಕ್ಷ ರೂ. ಮೌಲ್ಯದ ಕಾಫಿ ಬೀಜವನ್ನು ಕಳವು ಮಾಡಿತ್ತು. ಈ ಬಗ್ಗೆ ಸ್ಥಳೀಯ ಕಾಫಿ ಬೆಳೆಗಾರರ ಸಂಘದ ಸಹಕಾರದೊಂದಿಗೆ ಪೊಲೀಸ್ ಠಾಣೆಗೆ ಮಾಲೀಕರು ತೆರಳಿ ದೂರು ಸಲ್ಲಿಸಿದ್ದರು. ತ್ವರಿತವಾಗಿ ಖದೀಮರನ್ನು ಪತ್ತೆ ಹಚ್ಚಿ ನ್ಯಾಯ ಒದಗಿಸಬೇಕು ಎಂದು ಮನವಿ ಸಹ ಮಾಡಿದ್ದರು. ಇದಾದ ಬೆನ್ನಲ್ಲೇ ಎಚ್ಚೆತ್ತ ಪೊಲೀಸ್ ಇಲಾಖೆ ರಾತ್ರಿ ಸಮಯದಲ್ಲಿ ಗಸ್ತು ಚುರುಕುಗೊಳಿಸಿತ್ತು. ಆದರೂ ಕಳ್ಳರು ಮತ್ತೆ ಕಳವಿಗೆ ಯತ್ನಿಸಿದ್ದಲ್ಲದೆ ಮಾಲೀಕರ ಮೇಲೆ ಹಲ್ಲೆ ಮಾಡಿರುವುದು ಸಹಜವಾಗಿಯೇ ಈ ಭಾಗದ ಜನರಲ್ಲಿ ಆತಂಕ ಮೂಡಿಸಿದೆ.

# ಯುವಕನ ಕೊಲೆ ಜಾಗದಲ್ಲಿ ಮಹಜರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರ ಹೊರವಲಯದ ಚನ್ನಪಟ್ಟಣದ ಖಾಲಿ ಜಾಗದಲ್ಲಿ ಇತ್ತೀಚೆಗೆ ನಡೆದ ಕೊಲೆ ಪ್ರಕರಣ ಸಂಬಂಧ ಗುರುವಾರ ಪೊಲೀಸರು ಪ್ರಮುಖ ಆರೋಪಿ ಸಮ್ಮುಖದಲ್ಲಿ ಸ್ಥಳ ಮಹಜರು ನಡೆಸಿದರು. ಹೂವಿನಹಳ್ಳಿ ಗ್ರಾಮದ ಕೀರ್ತಿ (24) ಎಂಬಾತನನ್ನು ಡಿ. 8ರಂದು ಕೊಲೆ ಮಾಡಲಾಗಿತ್ತು. ಎ1 ಆರೋಪಿ ಉಲ್ಲಾಸ್‌ನನ್ನು ಬುಧವಾರ ಬೆಂಗಳೂರಿನಲ್ಲಿ ಪೊಲೀಸರು ಬಂಧಿಸಿದ್ದರು.

ಚನ್ನಪಟ್ಟಣ ಗ್ರಾಮದ ಪವನಪುತ್ರ ಕೋಳಿ ಫಾರಂ ಹಿಂಭಾಗದ ಖಾಲಿ ಜಾಗದಲ್ಲಿ ಕೀರ್ತಿ ಎದೆ ಮೇಲೆ ಕಲ್ಲು ಎತ್ತಿ ಹಾಕಲಾಗಿತ್ತು. ಡಿವೈಎಸ್ಪಿ ಗಂಗಾಧರಪ್ಪ ಹಾಗೂ ಸಿಬ್ಬಂದಿ ಉಲ್ಲಾಸ್‌ನನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿ ನಂತರ ಘಟನಾ ಸ್ಥಳಕ್ಕೆ ಕರೆದೊಯ್ದರು. ಕೃತ್ಯಕ್ಕೆ ಬಳಸಿದ್ದ ಕಲ್ಲು ಹಾಗೂ ಕೊಲೆ ಮಾಡಿದ ಜಾಗವನ್ನು ಆತ ತೋರಿಸಿದ. ಕೃತ್ಯದಲ್ಲಿ ಇನ್ನು ಇಬ್ಬರು ಪಾಲ್ಗೊಂಡಿರುವ ಶಂಕೆಯಿದ್ದು ಅವರ ಪತ್ತೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು 5 ಪ್ರತ್ಯೇಕ ತಂಡ ರಚಿಸಿದ್ದಾರೆ. ಘಟನೆ ಬಳಿಕ ಎಲ್ಲರೂ ಬೆಂಗಳೂರಿಗೆ ತೆರಳಿದ್ದರು. ಉಲ್ಲಾಸ್ ತನ್ನ ಸಹೋದರಿ ಮನೆಯಲ್ಲಿದ್ದಾಗ ಪೊಲೀಸರು ದಾಳಿ ನಡೆಸಿ ವಶಕ್ಕೆ ಪಡೆದಿದ್ದರು.

# ಸಕಲೇಶಪುರದಲ್ಲಿ ಭೂಮಿ ತಾಯಿ ಸಂರಕ್ಷಣಾ ಆಂದೋಲನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಭೂಮಿ ತಾಯಿ ಸಂರಕ್ಷಣಾ ಆಂದೋಲನ ಹಾಗೂ ನೈಸರ್ಗಿಕ ಕೃಷಿಯ ರಾಷ್ಟ್ರೀಯ ಅಭಿಯಾನಕ್ಕೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಭೂಮಿ ತಾಯಿ ರಕ್ಷಣೆ ಮಣ್ಣಿನ ಸಂರಕ್ಷಣೆಯಿಂದ ಮಾತ್ರ ಸಾಧ್ಯವಿದೆ. ರೈತರು ಮಣ್ಣಿನ ಫಲವತ್ತತೆ ಕಾಪಾಡಲು ಆಸಕ್ತಿ ವಹಿಸಬೇಕು. ಆಧುನಿಕ ಕೃಷಿಯಲ್ಲಿ ರಸಗೊಬ್ಬರ, ಕೀಡೆ ನಾಶಕ ಮತ್ತು ಕಳೆ ನಾಶಕಗಳ ಬಳಕೆಯಿಂದ ಮಣ್ಣಿನ ಮತ್ತು ನೀರಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆ ಮೂಲಕ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತವೆ. ನಿಸರ್ಗ ಮೂಲದಲ್ಲೇ ಲಭ್ಯವಿರುವ ಸೂಕ್ಷ್ಮ ಜೀವಿಗಳ ಬಳಕೆ, ಜೈವಿಕ ಕೀಡೆ ನಾಶಕಗಳ ಬಳಕೆ ಬಗ್ಗೆ ಅರಿವು ಹೊಂದಬೇಕು ಎಂದು ಸಲಹೆ ನೀಡಿದರು.

ಜಂಟಿ ಕೃಷಿ ನಿರ್ದೇಶಕ ಪಿ.ರಮೇಶ್ ಕುಮಾರ್ ಮಾತನಾಡಿ, ಈ ವರ್ಷ ಸಕಲೇಶಪುರ ತಾಲ್ಲೂಕಿನ 5 ಹೋಬಳಿಗಳ, 10 ಗ್ರಾಮ ಪಂಚಾಯಿತಿ ವ್ಯಾಪ್ತಿಯ, 20 ಹಳ್ಳಿಗಳಲ್ಲಿ 625 ರೈತರ ತೋಟಗಳಲ್ಲಿ ಈ ಯೋಜನೆಯನ್ನು 2 ವರ್ಷಗಳ ಕಲಾವಧಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. 2 ವರ್ಷಗಳ ನಂತರ ಯೋಜನೆಯ ಉದ್ದೇಶವನ್ನು ಇತರೆ ರೈತರಿಗೆ ವಿಸ್ತರಿಸಲಾಗುತ್ತದೆ. ಯೋಜನೆಯಡಿ ನೈಸರ್ಗಿಕ ಕೃಷಿ ಜಮೀನನ್ನು ಮತ್ತು ಸಂಬಂಧಿತ ಉತ್ಪನ್ನಗಳನ್ನು ಸರ್ಟಿಫಿಕೇಶನ್ ಮಾಡಿಸಲು ಕೃಷಿ ಇಲಾಖೆಯ ಪ್ರೋತ್ಸಾಹವಿದೆ ಎಂದರು.

ಉದ್ಯಮಿ ಡಿ.ಎಂ.ಪೂರ್ಣೇಶ್ ಮಾತನಾಡಿ, ಹಾರ್ಲೆ ಕಾಫಿ



ಎಸ್ಟೇಟ್‌ನಲ್ಲಿ ಕಾಫಿ ಗುಣಮಟ್ಟ ಕಾಪಾಡಲು ಅಳವಡಿಸಿರುವ ಪಲ್ಪಿಂಗ್ ಘಟಕ, ಸರ್ಕಾರದ ಸಹಾಯಧನದಡಿ ನಿರ್ಮಿಸಿರುವ ಸೋಲಾರ್ ಡ್ರೈಯರ್, ಕಾಫಿ ಪ್ರಯೋಗಾಲಯದಲ್ಲಿ ಕೈಗೊಳ್ಳುತ್ತಿರುವ ವಿವಿಧ ಕಾಫಿ ಉತ್ಪನ್ನ ಮಾದರಿಗಳ ಕುರಿತು ವಿವರಿಸಿದರು.

ಸಹಾಯಕ ಕೃಷಿ ನಿರ್ದೇಶಕ ಯು.ಎಂ. ಪ್ರಕಾಶ್ ಕುಮಾರ್ ಮಾತನಾಡಿದರು. ಕಾಫಿ ಬೆಳೆಗಾರರಾದ ಹಾನುಬಾಳು ಭಾಸ್ಕರ್, ಅನ್ನಪೂರ್ಣೇಶ್ವರಿ ಪ್ಲಾಂಟೇಷನ್ ಚಂದ್ರೇಗೌಡ, ಅನಿಲ್ ಮತ್ತು ಇತರರೊಂದಿಗೆ ದೋಣಿಗಾಲ್ ಏಲಕ್ಕಿ ಮತ್ತು ಸಂಬಾರ ಸಂಶೋಧನಾ ಕೇಂದ್ರದ ಮುಖ್ಯ ವಿಜ್ಞಾನಿ ಡಾ. ಹರ್ಷ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಶಿವಶಂಕರ್ ರೈತರೊಂದಿಗೆ ವಿಚಾರ ವಿನಿಮಯದಲ್ಲಿ ಭಾಗಿಯಾದರು.

ಇದೇ ವೇಳೆ ರೈತರಿಗೆ ಸರ್ಕಾರದ ಸಹಾಯಧನದಡಿ ಭತ್ತ ಕಟ್ಟಾವು ಯಂತ್ರ ವಿತರಿಸಲಾಯಿತು. ಜಿಲ್ಲಾ ಕೃಷಿಕ ಸಮಾಜದ ಉಪಾಧ್ಯಕ್ಷ ಹೆತ್ತೂರು ದೇವರಾಜು, ಜಿಲ್ಲಾ ಪ್ರತಿನಿಧಿ ಸಂಪತ್ ಕುಮಾರ್, ಕಸಬಾ ಬೆಳೆಗಾರರ ಸಂಘದ ಅಧ್ಯಕ್ಷ ಹೇಮರಾಜ್, ಶಶಿಧರ್, ಕೃಷಿ ಪರಿಕರ ಸಂಘದ ಅಧ್ಯಕ್ಷ ಅಜಿತ್ ಕುಮಾರ್, ರಾಜ್ ಕುಮಾರ್, ರವಿ ಇತರರಿದ್ದರು.

# ಕಾಂಗ್ರೆಸ್ ಸರ್ಕಾರದ ಹಿಂದು ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಹಿಂದು ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಗುರುವಾರ ಪಟ್ಟಣದಲ್ಲಿ ಹಿಂದು ಹಿತರಕ್ಷಣಾ ವೇದಿಕೆಯಿಂದ ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಹಿಂದು ಮುಖಂಡ ರಘು ಸಕಲೇಶಪುರ ಮಾತನಾಡಿ, ರಾಜ್ಯದಲ್ಲಿ ಜಾರಿಯಲ್ಲಿರುವ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ 2020 ಕಾಯ್ದೆಯಲ್ಲಿ ಅಕ್ರಮವಾಗಿ ಗೋವುಗಳ ಸಾಗಾಣಿಕೆ ಮಾಡಿದ ವಾಹನಗಳನ್ನ ಮುಟ್ಟುಗೋಲು ಹಾಕಿ ವಾಹನದ ಮೌಲ್ಯದ ಬಾಂಡ್ ಇಟ್ಟು ವಾಹನ ಬಿಡಿಸಿಕೊಂಡು ಹೋಗಬೇಕು ಎಂಬ ನಿಯಮವಿತ್ತು. ಕಾಂಗ್ರೆಸ್ ಸರ್ಕಾರ ಮುಸ್ಲಿಂ ತುಷ್ಟೀಕರಣ ದುರುದ್ದೇಶದಿಂದ ಅಕ್ರಮ ಗೋಸಾಗಾಣಿಕೆ ಮಾಡುವ ವಾಹನಗಳನ್ನ ಪೊಲೀಸ್ ಜಪ್ತಿ ಮಾಡಿದರೆ ಯಾವುದೇ ಬಾಂಡ್ ನೀಡದೆ ಬಿಡುಗಡೆಗೊಳಿಸಬೇಕು ಎಂದು ಮಸೂದೆಗೆ ತಿದ್ದುಪಡಿ ತಂದಿದೆ. ರಾಜ್ಯಪಾಲರು



ಅನುಮೋದನೆಗೆ ಸಹಿ ಹಾಕದೆ ತಿರಸ್ಕಾರ ಮಾಡಬೇಕು. ಸರ್ಕಾರ ಗೋ ಕಳ್ಳರಿಗೆ ಬೆಂಬಲ ನೀಡಿ ಗೋಕಳ್ಳತನ ಮಾಡಲು ಕುಮ್ಮಕ್ಕು ನೀಡುತ್ತಿದೆ, ಪ್ರಜಾಪ್ರಭುತ್ವದಲ್ಲಿ ಒಂದು ಸರ್ಕಾರ ಮಾಡಿರುವ ಕಾಯ್ದೆಯನ್ನು ದುರುದ್ದೇಶದಿಂದ ಒಂದು ಕೋಮನ್ನು ಓಲೈಕೆ ಮಾಡಲು ಯತ್ನಿಸುತ್ತಿರುವುದು ಖಂಡನೀಯ ಎಂದರು.

ರಸ್ತೆಯಲ್ಲಿ ಮಲಗಿದ ಗೋವುಗಳನ್ನ ಕದ್ದು ವಾಹನದಲ್ಲಿ ತುಂಬಿಸುವ ಕೃತ್ಯ ಹೆಚ್ಚಾಗುತ್ತಿದೆ.

ಕೊಟ್ಟಿಗೆಯಿಂದ ಕದ್ದು ತೆಗೆದುಕೊಂಡು ಹೋಗುವುದು, ಹೊಲಗಳಲ್ಲಿ ಮೇಯಲು ಬಿಟ್ಟ ದನಗಳನ್ನು ಕದ್ದು ವಾಹನದಲ್ಲಿ ತುಂಬಿಕೊಂಡು ಹೋಗುವ ದುಸ್ಸಾಹಸ ಮಾಡುವ ಎಲ್ಲಾ ಸಾಧ್ಯತೆ ಇದ್ದು ಇದು ರೈತರಿಗೆ ಹೈನುಗಾರಿಕೆ ಮಾಡುವವರ ಜೀವನ ಕಷ್ಟಮಯವಾಗುತ್ತದೆ ಕಳ್ಳತನ ಹೆಚ್ಚುತ್ತದೆ.

ಹೀಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 ವಿಧಾಯಕಕ್ಕೆ ಯಾವದೇ ತಿದ್ದುಪಡಿ ಮಾಡಲು ಅವಕಾಶ ನೀಡಬಾರದು ಮತ್ತು ತಿದ್ದುಪಡಿ ವಿಧೇಯಕ ಸಹಿ ಮಾಡದೇ ತಿರಸ್ಕಾರ ಮಾಡಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮುಸ್ಲಿಂ ತುಷ್ಟೀಕರಣ ಮಾಡುವ ದುರುದ್ದೇಶದಿಂದ ಟಿಪ್ಪು ಜಯಂತಿ ಆಚರಣೆ ಮಾಡಬೇಕು ಎಂದು ವಿವಾದ ಹಾಗು ಮತಾಂಧತೆಯನ್ನು ಸೃಷ್ಟಿಸಲು ಹೊರಟಿರೋದು ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಸರ್ಕಾರ ಜನರಿಗೆ ಬೇಕಾದ ಅಭಿವೃದ್ಧಿ ಹಾಗೂ ಶಾಂತಿ ನೆಮ್ಮದಿ ನೀಡುವ ಬದಲು ಓಲೈಕೆ ರಾಜಕಾರಣ ಮಾಡಲು ಮುಂದಾಗಿದೆ. ಟಿಪ್ಪು ಜಯಂತಿ ಎಂಬ ಆಚರಣೆ ಕರ್ನಾಟಕದಲ್ಲಿ ಮತ್ತೆ ಕೋಮು ಸಂಘರ್ಷಕ್ಕೆ ಜಯಂತಿ ಸಾಕ್ಷಿಯಾಗಲಿದ್ದು ಜನರ ಜನಜೀವನ ಸಂಕಷ್ಟಕ್ಕೆ ತಳ್ಳುವ ಸಾಧ್ಯತೆ ಇದ್ದು ರಾಜ್ಯಾದ್ಯಾಂತ ಶಾಂತಿ ಭಂಗವಾಗುವ ಎಲ್ಲ ಪ್ರಕರಣಗಳು ನಡೆಯುತ್ತವೆ. ಟಿಪ್ಪು ಜಯಂತಿ ನಡೆಸಲು ಸರಕಾರ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು.

# ಮಾನವ ಹಕ್ಕುಗಳಿಂದ ವ್ಯಕ್ತಿ ಸ್ವಾತಂತ್ರ್ಯ ರಕ್ಷಣೆ

## ಬೇಲೂರಿನಲ್ಲಿ ಮಾನವ ಹಕ್ಕು ದಿನಾಚರಣೆ | ಪುರಸಭೆ ಅಧ್ಯಕ್ಷೆ ಉಷಾ ಸತೀಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಮಾನವನ ಹಕ್ಕುಗಳು ಜಾತಿ, ಲಿಂಗ, ಧರ್ಮ, ಭಾಷೆ ಬೇಧವಿಲ್ಲದೆ ಪ್ರತಿಯೊಬ್ಬರ ಘನತೆ, ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ ಎಂದು ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಸಂಭಾಗಣದಲ್ಲಿ ಮಾನವ ಹಕ್ಕು ಹೋರಾಟಗಾರರ ಒಕ್ಕೂಟ ತಾಲ್ಲೂಕು ಘಟಕದಿಂದ ಆಯೋಜಿಸಿದ್ದ ಮಾನವ ಹಕ್ಕು ದಿನಾಚರಣೆ ಉದ್ಘಾಟಿಸಿ ಮಾತನಾಡಿ, 1948ರ ಡಿ. 10 ರಂದು ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಅಂಗೀಕರಿಸಿದ ದಿನ. ಇದು ನಮ್ಮೆಲ್ಲರ ಮೂಲಭೂತ ಹಕ್ಕುಗಳಾದ ಜೀವನ, ಶಿಕ್ಷಣ, ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ತಿಳಿಸುತ್ತದೆ. ಈ ಹಕ್ಕುಗಳನ್ನು ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಮಾನವ ಹಕ್ಕು ಹೋರಾಟಗಾರರ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಐ.ಎನ್. ಅರುಣ್ ಕುಮಾರ್ ಮಾತನಾಡಿ, ಜೀವಿಸುವ ಹಕ್ಕು, ಸ್ವಾತಂತ್ರ್ಯದ ಹಕ್ಕು, ಗುಲಾಮಗಿರಿ ಮತ್ತು ಚಿತ್ರಹಿಂಸೆಯಿಂದ ಮುಕ್ತಿ, ಶಿಕ್ಷಣ ಮತ್ತು ಕೆಲಸದ ಹಕ್ಕು, ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮಾನವ ಹಕ್ಕುಗಳ ಭಾಗಗಳಾಗಿವೆ. ನಮ್ಮ ಒಕ್ಕೂಟದಿಂದ ಪ್ರತಿವರ್ಷ ಮಾನವ ಹಕ್ಕು ದಿನಾಚರಣೆ ಆಚರಿಸುತ್ತಿದ್ದೇವೆ ಎಂದರು.

ಡಾ. ನಾರಾಯಣಸ್ವಾಮಿ ಮಾತನಾಡಿ, ಮಾನವ ಹಕ್ಕುಗಳು ಕೇವಲ ಘೋಷಣೆಯಾಗಿ ಉಳಿಯಬಾರದು. ಅವುಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಮ್ಮ ಹಕ್ಕುಗಳನ್ನು ಚಲಾಯಿಸುವಾಗ, ಇತರರ ಹಕ್ಕುಗಳನ್ನು ಗೌರವಿಸಬೇಕು. ಯಾವುದೇ ಸರ್ಕಾರ, ಗುಂಪು ಅಥವಾ ವ್ಯಕ್ತಿ ಇನ್ನೊಬ್ಬರ ಹಕ್ಕುಗಳನ್ನು ಉಲ್ಲಂಘಿಸಬಾರದು ಎಂದರು.

ತಾಲೂಕಿನ ಮಾನವ ಹಕ್ಕು ಹೋರಾಟಗಾರರ ಒಕ್ಕೂಟವು ಸಾಕಷ್ಟು ಉತ್ತಮ ಕೆಲಸಗಳನ್ನು ಮಾಡುತ್ತಾ ನೊಂದವರ ಹಾಗೂ ಸಾಮಾಜಿಕ ಕಳಕಳಿಯ ಧ್ವನಿಯಾಗಿ ಸಾಕಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಮಂದೆ ಇನ್ನಷ್ಟು ಉತ್ತಮ ಸೇವೆಗಳನ್ನು ಸಮಾಜಕ್ಕೆ ನೀಡಲಿ ಎಂದರು.

ಮಾನವ ಹಕ್ಕು ಹೋರಾಟಗಾರರ ಒಕ್ಕೂಟದ ಜಿಲ್ಲಾ ಅಧ್ಯಕ್ಷ ಎಂ.ಜಿ.ನಿಂಗರಾಜು ಮಾತನಾಡಿ, ಮಾನವ ಹಕ್ಕುಗಳು ಜಗತ್ತಿನ ಎಲ್ಲಾ ಜನರಿಗೆ, ಅವರ ಹಿನ್ನೆಲೆ ಏನೇ ಇರಲಿ, ಹುಟ್ಟಿನಿಂದಲೇ ಅನ್ವಯಿಸುತ್ತವೆ.

ಎಲ್ಲಾ ಮಾನವ ಹಕ್ಕುಗಳು (ಪೌರ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ) ಒಂದೇ ರೀತಿಯ ಮಹತ್ವ ಹೊಂದಿವೆ. ಒಂದಕ್ಕೊಂದು ಅವಿಭಾಜ್ಯವಾಗಿವೆ.

ಒಂದು ಹಕ್ಕನ್ನು ಪೂರೈಸಲು ಇತರ ಹಕ್ಕುಗಳ ಪೂರೈಕೆ ಅಗತ್ಯವಿದೆ. ಒಂದು ಹಕ್ಕನ್ನು ಸಾಧಿಸುವುದು ಇನ್ನೊಂದನ್ನು ಸಾಧಿಸಲು ಸಹಾಯ ಮಾಡುತ್ತದೆ. ಜನಾಂಗ, ಬಣ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ನಂಬಿಕೆ ಅಥವಾ ಇತರ ಯಾವುದೇ ಸ್ಥಾನಮಾನದ ಆಧಾರದ ಮೇಲೆ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ. ಈ ಹಕ್ಕುಗಳನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ (ಕಾನೂನು ಉಲ್ಲಂಘನೆ, ರಾಷ್ಟ್ರೀಯ ಭದ್ರತೆ) ಅವುಗಳನ್ನು ಸೀಮಿತಗೊಳಿಸಬಹುದು. ಅವು ಮನುಷ್ಯರ ಅಂತರ್ಗತ ಘನತೆ ಮತ್ತು ಸಮಾನತೆಯನ್ನು ಆಧರಿಸಿವೆ. ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯದಂತಹ ಮೌಲ್ಯಗಳನ್ನು ಉತ್ತೇಜಿಸುತ್ತವೆ ಎಂದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ವೀಣಾ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವಿಜಯ್ ಮಾತನಾಡಿದರು.

ರಾಷ್ಟ್ರೀಯ ಹೆದ್ದಾರಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಂಬಾಳೆ, ಮಾಜಿ ಸೈನಿಕ, ಒಕ್ಕೂಟದ ತಾಲ್ಲೂಕು ಘಟಕದ ಗೌರವಾಧ್ಯಕ್ಷ ಜಿ.ಬಿ.ವೆಂಕಟೇಶಗೌಡ, ಉಪಾಧ್ಯಕ್ಷ ಬಿ.ಕೆ.ರತ್ನಾಕರ್, ಪ್ರಧಾನ ಕಾರ್ಯದರ್ಶಿ ಲಕ್ಷ್ಮಿನಾರಾಯಣ್, ನಗರ ಅಧ್ಯಕ್ಷ ಶಂಕರ್ ಪ್ರಸಾದ್, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಗೌರವ ಕಾರ್ಯದರ್ಶಿ ಆರ್.ಎಸ್.ಮಹೇಶ್, ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ರಘುನಾಥ್, ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಜಯಲಕ್ಷ್ಮಿ ಭಾಗವಹಿಸಿದ್ದರು.

## ವಿದ್ಯುತ್ ಕೆಲಸಗಾರರ ಕ್ಷೇಮಾಭಿವೃದ್ಧಿ ಆದ್ಯತೆಯಾಗಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ವಿದ್ಯುತ್ ಕೆಲಸಗಾರರ ಕ್ಷೇಮಾಭಿವೃದ್ಧಿಯೇ ಸಂಘಗಳ ಆದ್ಯತೆಯಾಗಬೇಕು ಎಂದು ವಿದ್ಯುತ್ ಗುತ್ತಿಗೆದಾರರ ಸಂಘದ ಮುಖಂಡ ಅತ್ರಿ ಪ್ರಭಾಕರ್ ಹೇಳಿದರು.

ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯ ಗೌರವಾಧ್ಯಕ್ಷ ಎಸ್.ಎಂ.ಕೃಷ್ಣ ನೇತೃತ್ವದ ಸಂಘ ಪಟ್ಟಣದ ಪಿಆರ್ ಕಲ್ಯಾಣ ಮಂದಿರದಲ್ಲಿ ಪಂಚ ವರ್ಷದ ಮಹಾ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ವಿದ್ಯುತ್ ಕೆಲಸಗಾರರ ಜೀವನ ಸ್ಥಿತಿ ಶೋಚನೀಯ ಸ್ಥಿತಿಯಲ್ಲಿದೆ. ಅವರ ಅಭ್ಯುದಯಕ್ಕೆ ಸಂಘಗಳು ಪರಿಣಾಮಕಾರಿಯಾಗಿ ಗಮನ ಹರಿಸಬೇಕು. ಚುನಾವಣೆ ಎನ್ನುವುದು ನಿಮಿತ್ತ ಮಾತ್ರ. ಅದಕ್ಕೆ ಹೊರತಾಗಿ ಗುತ್ತಿಗೆದಾರರು ಮತ್ತು ಕೆಲಸಗಾರರು ಎಲ್ಲರೂ ಒಂದೇ. ಇದನ್ನು ಅರಿತು ಉತ್ತಮ ಮನೋಭಾವದಿಂದ ಸಂಘಟನೆ ನಡೆಸಬೇಕಿದೆ ಎಂದರು.

ರಾಜ್ಯ ಸಂಘದ ಮಾಜಿ ಉಪಾಧ್ಯಕ್ಷ ಪುರುಷೋತ್ತಮ್ ಮಾತನಾಡಿದರು. ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಕಲ್ಲೇಶಾಚಾರ್, ರವಿ, ಮುಖಂಡ ರಂಗೇಗೌಡ ಹಾಗೂ ಅರಸೀಕೆರೆ ಸಂಘದ ಅಧ್ಯಕ್ಷ ಚಂದ್ರಪ್ಪ ಉಪಸ್ಥಿತರಿದ್ದರು.

## ಕೃಷಿಯಲ್ಲಿ ತಾಳೆ ಬೆಳೆ ಕೈಗೊಂಡರೆ ಅಧಿಕ ಲಾಭ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ರೈತರು ತಾಳೆ ಬೆಳೆ ಕೃಷಿ ಕೈಗೊಳ್ಳುವುದರಿಂದ ನಿರ್ದಿಷ್ಟ ಆದಾಯ ಪಡೆಯಬಹುದು ಎಂದು ಪತಂಜಲಿ ಕಂಪನಿ ಕ್ಷೇತ್ರಾಧಿಕಾರಿ ಹನುಮೇಗೌಡ ಹೇಳಿದರು.

ರಾಜನಶಿರಿಯೂರು ಗ್ರಾಮದ ಪುಟ್ಟಮಲ್ಲೇಗೌಡರ ತೋಟದಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಪತಂಜಲಿ ಕಂಪನಿ ಆಶ್ರಯದಲ್ಲಿ ನಡೆದ ತಾಳೆ ಬೆಳೆ ಯೋಜನೆ ಅಡಿಯಲ್ಲಿ ರೈತರಿಗೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ತಾಳೆ ಬೆಳೆ ನಾಟಿ ಮಾಡಿದ ನಾಲ್ಕು ವರ್ಷದ ನಂತರ ಫಸಲು ಬರುತ್ತದೆ. ತಾಳೆ ಮಾರುಕಟ್ಟೆಗಾಗಿ ಪರದಾಡುವ ಅಗತ್ಯವಿಲ್ಲ. ಪತಂಜಲಿ ಕಂಪನಿ ನೇರವಾಗಿ ರೈತರಿಂದ ತಾಳೆ ಫಸಲನ್ನು ಉತ್ತಮ ಬೆಲೆಗೆ ಖರೀದಿ ಮಾಡುತ್ತದೆ ಎಂದು ಹೇಳಿದರು.

ತಾಳೆ ಬೆಳೆ ಮಾಡಲು ಕೃಷಿ ಇಲಾಖೆಯಿಂದ ಸಹಾಯ ಧನ ದೊರಕುತ್ತದೆ. ತಿಂಗಳಿಗೆ ಎರಡು ಬಾರಿ ಕೊಯ್ಲು ಮಾಡಿ ಮಾರಾಟ ಮಾಡಲು ಅವಕಾಶವಿದೆ. ರೈತರು ತೋಟಗಾರಿಕೆ ಇಲಾಖೆ ಸಂಪರ್ಕಿಸಿ ತಾಳೆ ಕೃಷಿಯ ಮಾಹಿತಿ ಪಡೆಯಬೇಕು ಎಂದು ಹನುಮೇಗೌಡ ಹೇಳಿದರು.

ಕಂದಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ನಾಗರಾಜು ಮಾತನಾಡಿ, ಅಡಿಕೆ ಬೆಳೆಯ ಎಲೆ ಚುಕ್ಕೆ ರೋಗ ನಿಯಂತ್ರಣಕ್ಕೆ 1 ಲೀಟರ್ ನೀರಿಗೆ 1 ಮಿಲಿ ಪ್ರೊಫಿನೋಕೋನಜೋಲ್ ಸಿಂಪಡಣೆ ಮಾಡಬೇಕು. ತೆಂಗಿನ ಬೆಳೆಯ ಕಾಂಡ ಸೋರುವ ರೋಗ ನಿಯಂತ್ರಣಕ್ಕೆ ಹೆಕ್ಸಾ ಕೊನೋಝೋಲ್ ಎಂಬ 5 ಮಿಲಿ ಔಷಧಿಯನ್ನು 100 ಮಿಲಿ ನೀರಿಗೆ ಮಿಶ್ರಣ ಮಾಡಿ, ತೆಂಗಿನ ಗಿಡದ ಬೇರಿಗೆ ಬಳಕೆ ಮಾಡಬೇಕು ಎಂದು ಸಲಹೆ ಮಾಡಿದರು.

ತೋಟಗಾರಿಕಾ ಅಧಿಕಾರಿ ಕೆ.ಆರ್.ಮಧುಕುಮಾರ್ ಅಮಾತನಾಡಿ, ತಾಳೆಯಿಂದ ಅಡುಗೆ ಎಣ್ಣೆ ಹಾಗೂ ಸೌಂದರ್ಯ ವರ್ಧಕಗಳು ತಯಾರಾಗುತ್ತವೆ. ಹೀಗಾಗಿ ತಾಳೆ ಫಸಲಿಗೆ ನಿರ್ದಿಷ್ಟ ಮಾರುಕಟ್ಟೆ ಇರುತ್ತದೆ. ತಾಳೆ ಬೆಳೆಯೊಂದಿಗೆ ಅಂತರ ಬೆಳೆ ಮಾಡಿಕೊಂಡು ಹೆಚ್ಚಿನ ಆದಾಯ ಪಡೆಯಲು ಅವಕಾಶವಿದೆ ಎಂದರು.

ದೊಡ್ಡಬ್ಯಾಡಗೆರೆ ಪ್ರಗತಿಪರ ರೈತ ಅನಂತ್ ಕುಮಾರ್ ಅವರನ್ನು ಗೌರವಿಸಲಾಯಿತು. ಕೃಷಿ ಅಧಿಕಾರಿ ಹೇಮಂತ್ ಕುಮಾರ್, ತೋಟಗಾರಿಕೆ ಅಧಿಕಾರಿಗಳಾದ ರಂಜಿತಾ, ಕಿಶೋರ್ ಮಾತನಾಡಿದರು. ರೈತ ಪುಟ್ಟಮಲ್ಲೇಗೌಡ, ಶಿಕ್ಷಕ ಮೋಹನರಾಜು ಪಾಲ್ಗೊಂಡಿದ್ದರು.

## ಆಧುನಿಕ ಕೃಷಿ ಪದ್ಧತಿಯಿಂದ ಲಾಭಗಳಿಕೆ ಸಾಧ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ರೈತರು ಸಾಂಪ್ರದಾಯಕ ಪದ್ಧತಿಗೆ ಜೋತು ಬೀಳದೆ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಾಗ ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಲು ಸಾಧ್ಯ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರೈತ ಎಂ.ಸಿ.ರಂಗಸ್ವಾಮಿ ತಿಳಿಸಿದರು.

ತಾಲೂಕು ರೈತ ಸಂಘದಿಂದ ದೊಡ್ಡಮಗ್ಗೆ ಗ್ರಾಮದ ಮಗ್ಗೆ ಮನೆಯಲ್ಲಿ ಏರ್ಪಡಿಸಿದ್ದ ಕೃಷಿ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಹಲವು ತಂತ್ರಜ್ಞಾನಗಳ ಆವಿಷ್ಕಾರವಾಗಿದೆ. ರೈತರು ತಜ್ಞರ ಸಲಹೆ ಪಡೆದು ಅದನ್ನು ಅಳವಡಿಸಿಕೊಳ್ಳಬೇಕು. ಮಿಶ್ರ ಪದ್ಧತಿ ಬೇಸಾಯ ಕ್ರಮದಿಂದ ನಷ್ಟವಾಗುವುದನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ. ಹೈನುಗಾರಿಕೆ ಬಹಳಷ್ಟು ರೈತರ ಆದಾಯದ ಮೂಲವಾಗಿದ್ದು ಅದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದರೆ ಇನ್ನೂ ಹೆಚ್ಚಿನ ಲಾಭ ಪಡೆಯಬಹುದು. ತಾವು ಇಸ್ರೇಲ್ ಮಾದರಿಯಲ್ಲಿ ರೂಪಿಸಿರುವ ಡೈರಿಯಿಂದ ಗುಣಮಟ್ಟದ ಹಾಲು ಉತ್ಪಾದಿಸುತ್ತಿದ್ದು ಅದಕ್ಕೆ ಹೊರ ದೇಶಗಳ ತಜ್ಞರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ ಎಂದರು.

ಕೃಷಿಕರು ಕುಟುಂಬದಲ್ಲಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕೂಡು ಕುಟುಂಬ ನಡೆಸಿದಾಗ ಕೃಷಿ ಕಷ್ಟಕರವಾಗುವುದಿಲ್ಲ. ದುಶ್ಚಟ ತೊರೆದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ ಅವರನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಅಗತ್ಯ ಎಂದರಲ್ಲದೆ ತಮ್ಮ ಕೃಷಿ ಅನುಭವಗಳ ಕುರಿತು ಮಾಹಿತಿ ನೀಡಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಎಸ್.ವಿ.ಯೋಗಣ್ಣ ಮಾತನಾಡಿ, ತಾಲೂಕಿನ ರೈತರಿಗೆ ಪ್ರಗತಿಪರ ಕೃಷಿಕ ಎಂ.ಸಿ.ರಂಗಸ್ವಾಮಿ ಅವರ ಕೃಷಿ ಅನುಭವಗಳ ಕುರಿತು ಮಾಹಿತಿ ದೊರಕಿಸಿಕೊಡುವ ಉದ್ದೇಶದಿಂದ ಕೃಷಿ ಸಂವಾದ ಹಮ್ಮಿಕೊಳ್ಳಲಾಗಿದೆ. ತಮ್ಮ ಪಗ್ರತಿಪರ ಕೃಷಿಯ ಮೂಲಕ ರಂಗಸ್ವಾಮಿ ಅವರು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ಪಡೆಯುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಇವರ ಕೃಷಿ ಸಾಧನೆಗೆ ಕರ್ನಾಟಕ ರತ್ನ ಹಾಗೂ ಭಾರತ ರತ್ನ ಪ್ರಶಸ್ತಿ ದೊರಕುವಂತಾಗಬೇಕು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಕುರಿತು ಗಮನ ಹರಿಸಿಲಿ ಎಂದರು.

ರೈತ ಸಂಘದ ಸದಸ್ಯರು ರೈತ ನಾಯಕ ದಿ. ಎಂ.ಡಿ.ನಂಜುಂಡಸ್ವಾಮಿ ಅವರ ಭಾವಚಿತ್ರವನ್ನು ನೀಡಿ ರಂಗಸ್ವಾಮಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿದರು.

ಸಹಾಯಕ ಕೃಷಿ ನಿರ್ದೇಶಕಿ ಕೆ.ಜಿ. ಕವಿತಾ, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಡಿ. ರಾಜೇಶ್, ರೈತ ಮುಖಂಡರಾದ ಬಂದಿಗನಹಳ್ಳಿ ರವಿ, ಕೃಷ್ಣೇಗೌಡ, ಕಮಲಮ್ಮ ಸೇರಿದಂತೆ ಹಲವು ನೂರಕ್ಕೂ ಹೆಚ್ಚಿನ ರೈತರು ಸಂವಾದದಲ್ಲಿ ಭಾಗವಹಿಸಿದ್ದರು. ರೈತರು ರಂಗಸ್ವಾಮಿ ಅವರ ಡೈರಿ, ಕೃಷಿ ತಾಕುಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು.

## ವಕೀಲರ ಕಚೇರಿಗಳಿಗೂ ಗೃಹ ಜ್ಯೋತಿ ಅವಕಾಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಚನ್ನರಾಯಪಟ್ಟಣ: ನಗರ, ಪಟ್ಟಣ ಪ್ರದೇಶದಲ್ಲಿ ಹೊಂದಿರುವ ವಕೀಲರ ಕಚೇರಿಗಳಿಗೆ ಗೃಹ ಜ್ಯೋತಿ ಗ್ಯಾರಂಟಿ ಯೋಜನೆಯಡಿ ಉಚಿತ ವಿದ್ಯುತ್ ಪಡೆಯಲು ಸರ್ಕಾರ ಸುತ್ತೋಲೆ ಹೊರಡಿಸಿದೆ. ವಕೀಲರು ಅದರ ಸದುಪಯೋಗ ಪಡೆಯಬೇಕು ಎಂದು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್‌ಗೌಡ ತಿಳಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿ, ವಕೀಲ ವೃತ್ತಿ ನಡೆಸುವ ಮತ್ತು ವಕೀಲರು ಪಟ್ಟಣಗಳಲ್ಲಿ ಹೊಂದಿರುವ ಕಚೇರಿಗಳನ್ನು ಸರ್ಕಾರ ವಾಣಿಜ್ಯ ಉದ್ದೇಶ ಎಂಬುದಾಗಿ ಪರಿಗಣಿಸಿ ಗೃಹಜ್ಯೋತಿ ಯೋಜನೆಯಿಂದ ಹೊರಗಿಟ್ಟಿತ್ತು. ಇದೀಗ ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಮನವಿ ಮೇರೆಗೆ ಸರ್ಕಾರ ಆದೇಶ ಹೊರಡಿಸಿದೆ. ವಕೀಲರ ಕಚೇರಿಗಳು ಸೇವಾ ವಲಯವೆಂದು ಪರಿಗಣಿಸಿ ಎಲ್‌ಟಿ-3 ಗ್ರೇಡ್‌ನಿಂದ ಎಲ್‌ಟಿ-1 ಗ್ರೇಡ್‌ಗೆ ತಂದು ಗೃಹಬಳಕೆ ಉದ್ದೇಶ ಎಂದು ಭಾವಿಸಿ ಗೃಹ ಜ್ಯೋತಿದಡಿ ತಂದಿದೆ. ಆದರಿಂದ ಚನ್ನರಾಯಪಟ್ಟಣ ನಗರದಲ್ಲಿ 100ಕ್ಕೂ ಹೆಚ್ಚು ವಕೀಲರ ಕಚೇರಿಗಳಿದ್ದು, ತಮ್ಮ ಆಧಾರ್ ಕಾರ್ಡ್ ಲಿಂಕ್ ಮಾಡಿ ಯೋಜನೆಯ ಲಾಭ ಪಡೆಯಬೇಕು, ಇಲ್ಲವೇ ತಾಲೂಕು ಪಂಚಾಯಿತಿಯಲ್ಲಿರುವ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿ ಭೇಟಿ ನೀಡಿ ಮಾಹಿತಿ ಪಡೆಯಬೇಕೆಂದರು.

ಗ್ಯಾರಂಟಿ ಸಮಿತಿ ಸದಸ್ಯರು ಪಟ್ಟಣದ ಕೆಲ ನ್ಯಾಯಬೆಲೆ ಅಂಗಡಿಗಳಲ್ಲಿ ಕಾಡ್‌ಗೆ ಒಂದು ಕೆಜಿ ಅಕ್ಕಿ ಹಿಡಿಯುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಆರೋಪ ಕೇಳಿಬಂದ ನ್ಯಾಯಬೆಲೆ ಅಂಗಡಿಗಳ ಮೇಲೆ ಗ್ಯಾರಂಟಿ ಸದಸ್ಯರು ಮತ್ತು ಅಧಿಕಾರಿಗಳ ತಂಡ ಭೇಟಿ ಪರಿಶೀಲನೆ ನಡೆಸಿ ತಪ್ಪು ಕಂಡುಬಂದರೆ ಕ್ರಮಕ್ಕೆ ಸೂಚಿಸಬೇಕು. ಈ ಕುರಿತಾಗಿ ತಾಲ್ಲೂಕಿನ ಎಲ್ಲ ಪಡಿತರ ಅಂಗಡಿ ಮಾಲೀಕರ ಸಭೆಯನ್ನು ತಹಶೀಲ್ದಾರ್‌ರವರ ನೇತೃತ್ವದಲ್ಲಿ ಕರೆದು ಚರ್ಚಿಸಲಾಗುವುದು ಎಂದರು.

ಗೃಹಜೋತಿ ಯೋಜನೆಗೆ ತಾಲೂಕಿನಲ್ಲಿ 88,103 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಅದರಲ್ಲಿ 83,108 ಅರ್ಹ ಫಲಾನುಭವಿಗಳು ಗೃಹ ಜ್ಯೋತಿಯಲ್ಲಿ ಉಚಿತವಾಗಿ ವಿದ್ಯುತ್ ಪಡೆಯುತ್ತಿದ್ದಾರೆ. ಶೇ.99.77ರಷ್ಟು ಪ್ರಗತಿ ಸಾಧಿಸಿದೆ. ಅದರ ಜೊತೆಗೆ ಶಕ್ತಿ ಯೋಜನೆಯ ಮೂಲಕ ತಾಲೂಕಿನಲ್ಲಿ ಪ್ರತಿ ತಿಂಗಳು ಸರಾಸರಿ 5,85,000 ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಿದ್ದು, ಸರ್ಕಾರದಿಂದ 2.73 ಕೋಟಿ ರೂ. ಬಂದಿದೆ. ಯುವ ನಿಧಿ ಯೋಜನೆ ಅಡಿಯಲ್ಲಿ 321 ಪುರುಷರು, 423 ಮಹಿಳೆಯರು ಮತ್ತು ಡಿಪ್ಲೊಮಾ ಪದವಿ ಪಡೆದ 8 ಪುರುಷರು ಹಾಗೂ 5 ಮಹಿಳೆಯರು ಸೇರಿದಂತೆ ಒಟ್ಟು 757 ವಿದ್ಯಾರ್ಥಿಗಳಿಗೆ ಸರ್ಕಾರದಿಂದ 22.50 ಲಕ್ಷ ರೂ. ಫಲಾನುಭವಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾವಣೆ ಆಗುತ್ತಿದೆ ಎಂದು ಹೇಳಿದರು.

## ಗಣಪಯ್ಯ ಶಾಲೆಯಲ್ಲಿ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಮತ್ತು ಶಿಕ್ಷಣ ಸಮನ್ವಯ ಅಧಿಕಾರಿಗಳ ಕಚೇರಿ ಹಾಗೂ ಎನ್.ಕೆ. ಗಣಪಯ್ಯ ರೋಟರಿ ಶಾಲೆಯ ಸಂಯುಕ್ತ ಆಶ್ರಯದಲ್ಲಿ ತಾಲೂಕು ಮಟ್ಟದ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕೌಡಹಳ್ಳಿ ಎನ್.ಕೆ. ಗಣಪಯ್ಯ ರೋಟರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯಲ್ಲಿ ನಡೆಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ ಮಾತನಾಡಿ, ಕ್ಲಸ್ಟರ್ ಮಟ್ಟದಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಿ ಗೆಲುವು ಸಾಧಿಸಬೇಕು ಎಂದರು.

ಪ್ರಾಂಶುಪಾಲ ಲೋಕೇಶ್ ಮಾತನಾಡಿ, 37 ವರ್ಷಗಳಿಂದ ರೋಟರಿ ಟ್ರಸ್ಟ್‌ನ ಆಡಳಿತ ಮಂಡಳಿಯವರಿಂದ ನಮ್ಮ ಶಾಲೆಯು ವಿಶೇಷ ಮಕ್ಕಳಿಗೆ ವಿದ್ಯಾರ್ಜನೆ ಮಾಡುತ್ತ ಬಂದಿದೆ ಎಂದರು.

ಮಕ್ಕಳು ರಚಿಸಿದ ಮಣ್ಣಿನಲ್ಲಿ ಮೊಸಳೆ, ಆಮೆ, ಜಿಂಕೆ, ಮೊಲ, ಲವ್ ಬರ್ಡ್ಸ್, ಮಂಜರಾಬಾದ್ ಕೋಟೆ ಸೇರಿದಂತೆ ವಿವಿಧ ಬಗೆಯ ಮಣ್ಣಿನ ಕಲಾ ಕೃತಿಗಳು ಗಮನ ಸೆಳೆದವು. ಅಭಿನಯ ಗೀತೆ, ಭಕ್ತಿ ಗೀತೆ ಜನಪದ ಮತ್ತು ಭಾವಗೀತೆಗಳನ್ನು ಮಕ್ಕಳು ಹಾಡಿದರು.

ರೋಟರಿ ಟ್ರಸ್ಟ್ ಕಾರ್ಯದರ್ಶಿ ರವಿಕುಮಾರ್, ರೋಟರಿ ಸಂಸ್ಥೆಯ ಅಧ್ಯಕ್ಷ ವಿಜಯ ಶಂಕರ್, ರೋಟರಿ ಕ್ಲಬ್ ಅಧ್ಯಕ್ಷ ಚಂದ್ರಶೇಖರ್, ಶಿಕ್ಷಣ ಇಲಾಖೆಯ ಕುಶ್ವಂತ್, ಜಗದೀಶ್, ದೇವರಾಜು, ಮುತ್ತು ಇತರರಿದ್ದರು.

## ಜ.26 ರಂದು ಅಂಬೇಡ್ಕರ್ ಪ್ರತಿಮೆ ಅನಾವರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಮಿನಿ ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಜ.26 ರಂದು ಅನಾವರಣಗೊಳಿಸಲಾಗುವುದು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಅಂದು ನಗರದ ಎಲ್ಲಾ ರಸ್ತೆ ಹಾಗೂ ಬೀದಿಗಳನ್ನು ತಳಿರು ತೋರಣಗಳಿಂದ ಸಿಂಗರಿಸಲಿದ್ದು ಹಬ್ಬದಂತೆ ಆಚರಿಸಲಾಗುವುದು ಎಂದರು.

ಬೆಳಗಿನ ಉಪಹಾರ ಹಾಗೂ ಮಧ್ಯಾಹ್ನ ಪಾಲ್ಗೊಳ್ಳುವ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗುವುದು. ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಬಾರದು. ಕಡ್ಡಾಯವಾಗಿ ಹಾಜರಿರಬೇಕು ಎಂದು ಸೂಚಿಸಿದರು.

ಅಂಬೇಡ್ಕರ್ ಅವರು ದೇಶಕ್ಕೆ ನೀಡಿರುವ ಸಂವಿಧಾನವು ನಮ್ಮೆಲ್ಲರಿಗೂ ಬದುಕಿನ ದಾರಿದೀಪ ಹಾಗೂ ವರದಾನವಾಗಿದೆ. ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಸಹಬಾಳ್ವೆಯೊಂದಿಗೆ ಮುನ್ನಡೆಯುವುದು ಅಗತ್ಯವಿದೆ. ಅಂಬೇಡ್ಕರ್ ಅವರು ಒಂದೇ ಸಮುದಾಯಕ್ಕೆ ಸೀಮಿತವಾಗಿರುವ ವ್ಯಕ್ತಿಯಲ್ಲ. ಅವರು ವಿಶ್ವಮಾನವ ಎಂದು ವರ್ಣಿಸಿದರು.

ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಿ ಅನಾವರಣಗೊಳಿಸುವುದು ಸುಮಾರು 20-25 ವರ್ಷಗಳ ಬೇಡಿಕೆ ಹಾಗೂ ನಮ್ಮೆಲ್ಲರ ಕನಸಾಗಿತ್ತು. ಸದ್ಯ ಈಡೇರಿದ್ದು ಆ ಸುದಿನಕ್ಕಾಗಿ ನಾವೆಲ್ಲರೂ ಕಾತುರರಾಗಿದ್ದೇವೆ ಎಂದರು.

ತಾಲೂಕಿನ ಸಮಸ್ತ ಜನತೆ ಪಾಲ್ಗೊಂಡು ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ವಿವಿಧ ದಲಿತ ಪರ ಸಂಘಟನೆಗಳ ಮುಖಂಡರು ಪ್ರತಿಮೆ ಅನಾವರಣ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಶಾಸಕರೊಂದಿಗೆ ಚರ್ಚಿಸಿದರು.

ಪುರಸಭಾ ಅಧ್ಯಕ್ಷ ಕೋಟೆ ಮೋಹನ್, ತಹಶೀಲ್ದಾರ್ ಶಂಕರಪ್ಪ, ಪುರಸಭಾ ಮುಖ್ಯಾಧಿಕಾರಿ ಯತೀಶ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್, ದಲಿತಪರ ಸಂಘಟನೆಗಳ ಅಧ್ಯಕ್ಷರು, ಮುಖಂಡರು ಹಾಜರಿದ್ದರು.

## ಇತಿಹಾಸದಲ್ಲಿ ಈ ದಿನ

### ಡಿಸೆಂಬರ್-12

1911: ದೆಹಲಿ ಭಾರತದ ರಾಜಧಾನಿಯಾಗಿ ಘೋಷಣೆ.

1963: ಕೆನ್ಯಾ ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾಗಿ ಸ್ವಾತಂತ್ರ್ಯ ಪಡೆದ ದಿನ.

1991: ರಷ್ಯಾ ಫೆಡರೇಶನ್ ಅಧಿಕೃತವಾಗಿ ಸ್ಥಾಪನೆಗೊಂಡ ದಿನ.

2000: ಅಮೇರಿಕಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಾರ್ಜ್ ಡಬ್ಲ್ಯೂ. ಬುಶ್ ಜಯಶಾಲಿ ಎಂದು ಸುಪ್ರೀಂ ಕೋರ್ಟ್ ತೀರ್ಪು.

**ಜನನ**

1967: ರಾಜೀವ್ ದೀಕ್ಷಿತ್, ಭಾರತೀಯ ಸಮಾಜ ಚಿಂತಕ, ಸ್ವದೇಶಿ ಚಳವಳಿ ಕಾರ್ಯಕರ್ತ

1981: ಯುವರಾಜ ಸಿಂಗ್, ಭಾರತದ ಕ್ರಿಕೆಟ್ ಆಟಗಾರ

**ಮರಣ**

1987: ಚೌಧರಿ ಚರಣ್ ಸಿಂಗ್, ಭಾರತದ ಮಾಜಿ ಪ್ರಧಾನಿ

## ಮೈಸೂರಿನಲ್ಲಿ ಶ್ರವಣ ಸಾಧನಗಳ ಕುರಿತು ಕಾರ್ಯಾಗಾರ




ಮೈಸೂರು: ನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಬಿ.ಸಿ.ಲಿಂಗಯ್ಯ ಹಾಲ್‌ನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದಿಂದ **Speech Processing in Hearing Aids: Current Techniques, Challenges, and Opportunities** ವಿಷಯದ **ATAL Faculty Development Programme (FDP)** – 2025 ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸಂಶೋಧಕರು ಮತ್ತು ಉದ್ಯಮ ತಜ್ಞರು ಒಂದೇ ಸೂರಿನಡಿ ಒಟ್ಟಾಗಿ ಶ್ರವಣ ಸಾಧನಗಳಲ್ಲಿ ಬಳಸುವ ಸ್ಪೀಚ್ ಪ್ರೊಸೆಸಿಂಗ್ ತಂತ್ರಜ್ಞಾನಗಳ ಪ್ರಗತಿ, ಸವಾಲು ಮತ್ತು ಅವಕಾಶಗಳ ಬಗ್ಗೆ ಚರ್ಚಿಸಿದರು. ಕಾರ್ಯಕ್ರಮ ಉದ್ಘಾಟಿಸಿದ ಜರ್ಮನಿಯ ಪ್ಯಾನಾಸೋನಿಕ್-ಈ ಸಂಸ್ಥೆಯ ಸಂಶೋಧನಾ ಇಂಜಿನಿಯರ್ ಡಾ. ನಂದೀಶ್ ಪಿ. ಕುರುವಟ್ಟಿ ಮಾತನಾಡಿ, ಆಡಿಯೋ ಸಿಗ್ನಲ್ ಪ್ರೊಸೆಸಿಂಗ್‌ನ ವೇಗವಾದ ತಾಂತ್ರಿಕ ಪ್ರಗತಿ, ಎಐ ಆಧಾರಿತ ಸುಧಾರಿತ ತಂತ್ರ, 6ಜಿ ಸಂವಹನ ತಂತ್ರಜ್ಞಾನ ಮತ್ತು ಶ್ರವಣ ದೌರ್ಬಲ್ಯ ಹೊಂದಿರುವವರಿಗೆ ಸುಗಮ ಪ್ರವೇಶ ಕಲ್ಪಿಸಲು ಅಂತರ್ ಶಾಖಾ ಸಂಶೋಧನೆಯ ಅಗತ್ಯತೆಗಳನ್ನು ವಿವರಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248